ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 17–02–2023 ರ ಶುಕ್ರವಾರದಂದು ಪೂರ್ವಾಹ್ನ 11.00 ಗಂಟೆಗೆ ನಡೆದ ಪ್ರಾಧಿಕಾರದ 54 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2. ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
3. ಶ್ರೀ ಪುಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
4. ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
5. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
6. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ಗೈರುಹಾಜರಾದವರು :–

1. ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ

ವಿಷಯ ಸಂಖ್ಯೆ 01): ದಿನಾಂಕ: 06–01–2023 ರಂದು ನಡೆದ ಪ್ರಾಧಿಕಾರದ 53ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 06–01–2023 ರಂದು ನಡೆದ ಪ್ರಾಧಿಕಾರದ 53ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 53ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಯಾವುದೇ ಆಕ್ಷೇಪಣೆ ವ್ಯಕ್ತವಾಗದ ಕಾರಣ ಸದರಿ ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 02): ಪ್ರಾಧಿಕಾರದ ಖಾತೆಗೆ ಜನವರಿ 2023 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಜನವರಿ 2023 ರ ಮಾಹೆಯ ಜಮಾ & ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಕ್ರ. ಸಂ	ಖಾತೆಯ ವಿವರ	ಪ್ರಾರಂಭಿಕ ಶಿಲ್ಕು ರೂ.ಗಳಲ್ಲಿ	ಮಾಹೆಯ ಜಮಾ. ರೂ.ಗಳಲ್ಲಿ	ಮಾಹೆಯ ಖರ್ಚು. ರೂ.ಗಳಲ್ಲಿ	ಉಳಿಕೆ ಶಿಲ್ಕು ರೂ.ಗಳಲ್ಲಿ
1	2	3	4	5	6
ಜನವರಿ 2023					
1	ಉಳಿತಾಯ ಶುಲ್ಕದ ಖಾತೆ	20,48,011.50	4,17,400.00	1,55,287.00	23,10,124.50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	1,07,454.00	89,500.00	–––	1,96,954.00
3	ಸೆಸ್ ಶುಲ್ಕದ ಖಾತೆ	47,129.00	44400.00	––	91,529.00

ನಿರ್ಣಯ: ಜನವರಿ 2023 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 03): ಕುಶಾಲನಗರ ಯೋಜನಾ ಪ್ರಾಧಿಕಾರದ 2023–24ನೇ ಸಾಲಿನ ಆಯವ್ಯಯ ಅಂದಾಜಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ 2022–23 ನೇ ಸಾಲಿನ ಆಯವ್ಯಯ ಅಂದಾಜನ್ನು ಸರ್ಕಾರದ ಆದೇಶದ ರೀತ್ಯಾ ತಯಾರಿಸಿದ್ದು, ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಆಯವ್ಯಯವನ್ನು ಮಂಡಿಸಿದೆ.

ನಿರ್ಣಯ: ಕುಶಾಲನಗರ ಯೋಜನಾ ಪ್ರಾಧಿಕಾರದ 2022–23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಪ್ರಾಧಿಕಾರದ ಸಭೆಯು ಪರಿಶೀಲಿಸಿ ಚರ್ಚಿಸಿತು ಹಾಗೂ ಆಯವ್ಯಯ ಅಂದಾಜುಗಳನ್ನು ಸಭೆಯು ಅಂಗೀಕರಿಸಿತು ಹಾಗೂ ಅನುಮೋದನೆಗಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 04): ದಿನಾಂಕ: 07–01–2023 ರಿಂದ 16–02–2023 ರವರೆಗೆ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ (16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಅನುಮೋದನೆಯನ್ನು ಸ್ಥಿರೀಕರಿಸಲು ಮಂಡಿಸಿರುವ ಬಗ್ಗೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 55/2 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ನಾಗಮಲ್ಲೇಶ್**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 55/2 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: ಭೂಪರಿ/181/17–18(LAND10002299) ದಿನಾಂಕ: 14–02–2020 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಸದರಿ ಭೂಪರಿವರ್ತಿತ ಜಮೀನಿನ ಉತ್ತರಕ್ಕೆ ಗ್ರಾಮಪಂಚಾಯಿತಿ ನಿರ್ವಹಣೆಯಲ್ಲಿರುವ 9.0ಮೀ ಅಗಲದ ಸಾರ್ವಜನಿಕ ರಸ್ತೆ ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 369.10 ಚ.ಮೀ (ಶೇ. 91.28%) ಮತ್ತು ಬಫರ್‌ಗಾಗಿ 35.26 ಚ.ಮೀ (ಶೇ. 8.72%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ದಿನಾಂಕ:12–01–2023 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯನ್ನು ಸ್ಥಿರೀಕರಿಸುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 05): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 66/9 ರಲ್ಲಿ 2.00 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎಂ.ಎಸ್. ಕೃಷ್ಣೋಜಿರಾವ್**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಮತ್ತು ಅರ್ಜಿದಾರರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: LNDC10000014 ದಿನಾಂಕ: 09–12–2019 ರಂದು ವ್ಯವಸಾಯೇತರ Residential-layout ಉದ್ದೇಶಕ್ಕೆ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಜಮೀನಿನ ಪಶ್ಚಿಮಕ್ಕೆ ಹಾಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರುತ್ತದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ಹಾಗೂ ಟೋಟಲ್ ಸ್ಟೇಷನ್ ನಕ್ಷೆಯಂತೆ ವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ್ದು, ಅದರಂತೆ ವಸತಿಗಾಗಿ 4395.13 ಚ.ಮೀ (ಶೇ.54.31), ಉದ್ಯಾನವನಕ್ಕಾಗಿ 812.26 ಚ.ಮೀ (ಶೇ.10.03), ನಾಗರೀಕ ಸೌಲಭ್ಯಕ್ಕಾಗಿ 405.16 ಚ.ಮೀ (ಶೇ.5.00), ರಸ್ತೆಗಾಗಿ 2481.12 ಚ.ಮೀ (ಶೇ.30.66) ಕಾಯ್ದಿರಿಸಲಾಗಿದೆ. ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಸ್ತಾವಿತ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ಸಂಪರ್ಕ ರಸ್ತೆ ಲಗತ್ತಾಗಿದ್ದು, ಅಂತಿಮ ಮಹಾಯೋಜನೆಯಲ್ಲಿ ಜಮೀನು ವಸತಿ ವಲಯದಲ್ಲಿರುತ್ತದೆ ಹಾಗೂ ಸ್ಥಳಪರಿಶೀಲಿಸಿದಾಗ ಸದರಿ ಜಮೀನಿನ ಸುತ್ತಮುತ್ತಲು ಹಾಲಿ ಬೆಳವಣಿಗೆಗಳು ಕಂಡುಬಂದಿರುತ್ತದೆ. ಅರ್ಜಿದಾರರು ಸಲ್ಲಿಸಿರುವ (ಪರವಾನಿಗೆ ಭೂಮಾಪಕರು ತಯಾರಿಸಿರುವ) ಸರ್ವೆ ಸ್ಕೆಚ್‌ನಲ್ಲಿ ರಸ್ತೆಯು ಕಂಡುಬಂದಿದ್ದು, ಸದರಿ ರಸ್ತೆಯ ವರ್ಗ ಮತ್ತು ಮಾಲೀಕತ್ವದಲ್ಲಿ ಅಸ್ಪಷ್ಟತೆ ಇರುತ್ತದೆ ಹಾಗೂ ಇತ್ತೀಚಿನ ಆರ್.ಟಿ.ಸಿ, ಇ.ಸಿ ಪ್ರತಿ (ಇಲ್ಲಿಯವರೆಗೆ) ಮತ್ತು ಇತ್ತೀಚಿನ ಮ್ಯುಟೇಷನ್ ಪ್ರತಿ ಸಲ್ಲಿಸಬೇಕಿರುತ್ತದೆ. ಅದಕ್ಕೆ ಹಿಂಬರಹವನ್ನು ನೀಡಲಾಗಿರುತ್ತದೆ. ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲೂ ನ್ಯೂನತೆಗಳು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚಿಸಿದ ಸಭೆಯು ಪ್ರಸ್ತಾವಿತ ಜಮೀನಿಗೆ ಸಂಪರ್ಕ ಕಲ್ಪಿಸಿಕೊಂಡಿರುವ ರಸ್ತೆಗಳ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಬೇಕಿದ್ದು, ಸಲ್ಲಿಸಿರುವ ಸರ್ವೆ ಸ್ಕೆಚ್‌ನಲ್ಲಿ ಕಂಡುಬಂದ ನ್ಯೂನತೆಗಳನ್ನು ಹಾಜರುಪಡಿಸಬೇಕಾಗಿರುತ್ತದೆ. ಸದರಿ ಜಮೀನಿಗೆ ಹೊಂದಿಕೊಂಡಿರುವ ಪಕ್ಕದ ಜಮೀನಿನ ಸಂಪರ್ಕದ ರಸ್ತೆಗಳ ಬಗ್ಗೆಯೂ ಸಹ ಸ್ಪಷ್ಟೀಕರಣ ಪಡೆಯಬೇಕಾಗಿರುತ್ತದೆ. ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ನ್ಯೂನತೆ ಕಂಡುಬಂದಿದ್ದು, ಇಲ್ಲಿ ಸೂಚಿಸಿರುವ ದಾಖಲಾತಿಗಳನ್ನು ಸರಿಪಡಿಸಿ ಸಲ್ಲಿಸಿದ ನಂತರ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 06): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 99/4 ರಲ್ಲಿನ 0.90 ಎಕರೆ ಮತ್ತು 99/5 ರಲ್ಲಿ 0.47 ಎಕರೆ ಒಟ್ಟು 1.37 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ. (**ಅರ್ಜಿದಾರರು: ಶ್ರೀ ಸುಜಯ್ ಡಿ.ಜೆ ಬಿನ್ ಜಗದೀಶ್ ಡಿ.ಎಸ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಡ್ಡೆಹೊಸೂರು ಗ್ರಾಮಪಂಚಾಯಿತಿ ಮತ್ತು

ಅರ್ಜಿದಾರರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಪ್ರಸ್ತಾವಿತ ಜಮೀನುಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 407397 ರಲ್ಲಿ ಸ.ನಂ. 99/4 ರ 0.90 ಎಕರೆ ಮತ್ತು ಜ್ಞಾಪನ ಪತ್ರ ಸಂಖ್ಯೆ: 407398 ರಲ್ಲಿ ಸ.ನಂ. 99/5 ರ 0.47 ಎಕರೆ ಜಮೀನನ್ನು ದಿನಾಂಕ: 25–10–2022 ರಂದು ವಾಣಿಜ್ಯ commercial-commercial ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ. ಪ್ರಶ್ನಿತ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಒಬ್ಬರು ಮಾಲೀಕರ ಹೆಸರಿನಲ್ಲಿರುತ್ತದೆ. ಜಮೀನು ದಕ್ಷಿಣ ದಿಕ್ಕಿನಲ್ಲಿ 21.0ಮೀ, ಅಗಲದ ರಾಷ್ಟ್ರೀಯ ಹೆದ್ದಾರಿ–275 ರಸ್ತೆಗೆ ಲಗತ್ತಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ಹಾಗೂ ಟೋಟಲ್ ಸ್ಟೇಷನ್ ನಕ್ಷೆಯಂತೆ ವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ್ದು, ಅದರಂತೆ ಸದರಿ ನಕ್ಷೆಯಲ್ಲಿ ವಾಣಿಜ್ಯ ಉಪಯೋಗಕ್ಕಾಗಿ 3656.11 ಚ.ಮೀ (ಶೇ.65.94.%), ಉದ್ಯಾನವನ/ಬಫರ್‌ಗಾಗಿ 555.14 ಚ.ಮೀ (ಶೇ.10.01%), ವಾಹನ ನಿಲುಗಡೆಗಾಗಿ 277.75 ಚ.ಮೀ (ಶೇ.5.00%) ಮತ್ತು ರಸ್ತೆಗಾಗಿ 1055.28 ಚ.ಮೀ (ಶೇ.19.05%) ವಿಸ್ತೀರ್ಣದ ಭೂ–ಉಪಯೋಗ ಕಾಯ್ದಿರಿಸಲಾಗಿದೆ. ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರಸ್ತಾವಿತ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ದಕ್ಷಿಣ ದಿಕ್ಕಿನಲ್ಲಿ 21.0ಮೀ, ಅಗಲದ ರಾಷ್ಟ್ರೀಯ ಹೆದ್ದಾರಿ–275 ರಸ್ತೆಗೆ ಲಗತ್ತಾಗಿದೆ. ಪ್ರಶ್ನಿತ ಜಮೀನು ಅಂತಿಮ ಮಹಾಯೋಜನೆಯಲ್ಲಿ ವಾಣಿಜ್ಯ ವಲಯದಲ್ಲಿದೆ ಹಾಗೂ ಸ್ಥಳಪರಿಶೀಲನೆ ಮಾಡಿದಾಗ ಸದರಿ ಜಮೀನಿನ ಉತ್ತರ ದಿಕ್ಕಿನಲ್ಲಿ ಕೆರೆ ಇದ್ದು ಅದಕ್ಕೆ ಸೂಕ್ತವಾದ ಬಫರ್ ಜಾಗವನ್ನು ಬಿಡುವಾಗ ಸದರಿ ಪ್ರಸ್ತಾವಿತ ಜಮೀನಿನ ಎಲ್ಲೆಗಳನ್ನು ಒಳಗೊಳ್ಳುವ ಸಾಧ್ಯತೆ ಇರುತ್ತದೆ ಹಾಗೂ ಅರ್ಜಿದಾರರು ಸ.ನಂ. 99/4 ಮತ್ತು 99/5 ರ ಜಮೀನುಗಳನ್ನು ಜಂಟಿಯಾಗಿ ಅನುಮೋದನೆ ಪಡೆಯುತ್ತಿರುವ ಕಾರಣ ಎರಡು ಸರ್ವೆ ನಂಬರ್ ಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ. ಅದಲ್ಲದೆ ಅರ್ಜಿದಾರರು ಅಗತ್ಯ ದಾಖಲೆಗಳನ್ನು ಇತ್ತೀಚಿನ ಆರ್.ಟಿ.ಸಿ, ಇ.ಸಿ ಪ್ರತಿ (ಇಲ್ಲಿಯವರೆಗೆ), ಇತ್ತೀಚಿನ 11ಇ ನಕ್ಷೆ, ಬ್ಯಾಂಕ್‌ನಿಂದ ನಿರಾಕ್ಷೇಪಣಾ ಪತ್ರ (ಸದರಿ ಜಮೀನಿನ ಮೇಲಿರುವ ಆಧಾರದ ಕಾರಣ) ಸಲ್ಲಿಸಬೇಕಾಗಿರುತ್ತದೆ. ಅದಕ್ಕೆ ಹಿಂಬರಹವನ್ನು ನೀಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಸಭೆಗಾಗಿ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಸದರಿ ಜಮೀನಿನ ಉತ್ತರ ದಿಕ್ಕಿನಲ್ಲಿ ಕೆರೆ ಇದ್ದು ಅದಕ್ಕೆ ಹೊಂದಿಕೊಂಡಂತೆ ಸ.ನಂ. 99/1 ಮತ್ತು 99/2 ಅನ್ನು ಕಾಣಬಹುದಾಗಿರುತ್ತದೆ. ಸದರಿ ಸರ್ವೆ ನಂಬರ್‌ಗಳು ಉತ್ತಾರು ನಕ್ಷೆಯಲ್ಲಿ ತೋರಿಸಿರುವಂತೆ ಸ.ನಂ. 99/4 ಮತ್ತು 99/5 ಆಗಿ ಪೋಡಿಯಾಗಿರುತ್ತದೆ. ಆದ್ದರಿಂದ ಕೆರೆಯ ಸುತ್ತ ಬರುವ ಸೂಕ್ತವಾದ ಬಫರ್ ಜಾಗವನ್ನು ಬಿಡಬೇಕಾಗಿರುವುದರಿಂದ, ಹಾಗೂ ಸದರಿ ಪ್ರಸ್ತಾವಿತ ಜಮೀನಿನ ಎಲ್ಲೆಗಳನ್ನು ಒಳಗೊಳ್ಳುವ ಸಾಧ್ಯತೆ ಇರುವುದರಿಂದ, ಆ ಕೆರೆಯನ್ನು ಒಳಗೊಂಡಂತೆ ಸ.ನಂ. 99/1, 99/2, 99/4 ಮತ್ತು 99/5 ರ ಜಮೀನುಗಳ ಪರವಾನಗಿ ಭೂಮಾಪಕರಿಂದ ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿದ ಸರ್ವೆ ಸ್ಕೆಚ್ ಅನ್ನು ಸಲ್ಲಿಸಬೇಕಾಗಿರುತ್ತದೆ. ಸ.ನಂ. 99/4 ಮತ್ತು 99/5 ರ ಜಮೀನುಗಳನ್ನು ಜಂಟಿಯಾಗಿ ಅನುಮೋದನೆ ಪಡೆಯುತ್ತಿರುವ ಕಾರಣ ಎರಡು ಸರ್ವೆ ನಂಬರ್ ಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗದೆ ಇರುವ ಕಾರಣ ಸದರಿ ಜಮೀನುಗಳನ್ನು ಪ್ರತ್ಯೇಕವಾಗಿ ಗುರುತಿಸುವ ಗಡಿಗಳನ್ನು ಮರುಸ್ಥಳಪರಿಶೀಲನೆಯ ವೇಳೆ ತೋರಿಸಿದ ನಂತರ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಿದ ನಂತರ ಸದರಿ ಪ್ರಸ್ತಾವನೆಯ ಬಗ್ಗೆ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ 07): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 94 ರಲ್ಲಿ 5.12 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಗೌಡಯ್ಯ**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: 426161 ದಿನಾಂಕ: 24–01–2023 ರಂದು ವ್ಯವಸಾಯೇತರ Residential-layout ಉದ್ದೇಶಕ್ಕೆ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಜಮೀನಿನ 4.5ಮೀ ಅಗಲದ ಪಂಚಾಯಿತಿ ರಸ್ತೆಗೆ ಲಗತ್ತಾಗಿದೆ. ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸಬೇಕಾಗಿರುತ್ತದೆ. ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ್ದು, ಅದರಂತೆ ವಸತಿಗಾಗಿ 7959.64 ಚ.ಮೀ (ಶೇ.49.09), ಉದ್ಯಾನವನಕ್ಕಾಗಿ 2062.64 ಚ.ಮೀ (ಶೇ.12.72), ನಾಗರೀಕ ಸೌಲಭ್ಯಕ್ಕಾಗಿ 691.47 ಚ.ಮೀ (ಶೇ.04.26), ರಸ್ತೆಗಾಗಿ 5497.43 ಚ.ಮೀ (ಶೇ.33.93) ಕಾಯ್ದಿರಿಸಲಾಗಿದೆ. ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಪ್ರಸ್ತಾವಿತ ಜಮೀನಿನ ದಾಖಲೆಗಳನ್ನು ಹಾಗೂ ಸ್ಥಳಪರಿಶೀಲನೆ ಮಾಡಲಾಗಿರುತ್ತದೆ. ಅರ್ಜಿದಾರರು ಅಗತ್ಯ ದಾಖಲೆಗಳನ್ನು ಇತ್ತೀಚಿನ ಆರ್.ಟಿ.ಸಿ, ಇ.ಸಿ ಪ್ರತಿ (ಇಲ್ಲಿಯವರೆಗೆ), ಇತ್ತೀಚಿನ 11ಇ ನಕ್ಷೆ, ಬ್ಯಾಂಕ್‌ನಿಂದ ನಿರಾಕ್ಷೇಪಣಾ ಪತ್ರ (ಸದರಿ ಜಮೀನಿನ ಮೇಲಿರುವ ಆಧಾರದ ಕಾರಣ), ಜಮೀನಿನ ಕಾಂಟೂರ್ ನಕ್ಷೆ ಸಲ್ಲಿಸಬೇಕಾಗಿರುತ್ತದೆ. ಅದಕ್ಕೆ ಹಿಂಬರಹವನ್ನು ನೀಡಲಾಗಿರುತ್ತದೆ. ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ ಹಾಲಿ 4.5ಮೀ ಅಗಲದ ಪಂಚಾಯಿತಿ ರಸ್ತೆ ಇದ್ದು, ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸಬೇಕಾಗಿರುತ್ತದೆ. ಸದರಿ ಜಮೀನಿನ ಮಧ್ಯ ಭಾಗದಿಂದ ತೋಡು ಹಾದುಹೋಗುವುದರಿಂದ ಅದಕ್ಕೆ ಸೂಕ್ತವಾದ ಬಫರ್ ಅಳವಡಿಸಬೇಕಾಗಿರುತ್ತದೆ. ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿರುವ ವಿಸ್ತೀರ್ಣಕ್ಕೂ ಸರ್ವೆ ನಂಬರ್ ವಿಸ್ತೀರ್ಣಕ್ಕೂ ತಾಳೆ ಹೊಂದುತ್ತಿರುವುದಿಲ್ಲ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಸಭೆಗಾಗಿ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿರುವ ವಿಸ್ತೀರ್ಣಕ್ಕೂ ಸರ್ವೆ ನಂಬರ್ ವಿಸ್ತೀರ್ಣಕ್ಕೂ ತಾಳೆ ಹೊಂದುತ್ತಿರುವುದಿಲ್ಲ. ಸ್ಥಳಪರಿಶೀಲನೆ ವೇಳೆ ಈ ಅಂಶವನ್ನು ಗಮನಿಸಲಾಗಿದ್ದು, ಅರ್ಜಿದಾರರ ಸದರಿ ಜಮೀನಿನ ವಿಸ್ತೀರ್ಣದ ಕಾಂಟೂರ್ ನಕ್ಷೆಯನ್ನು ಸಲ್ಲಿಸಿದ ನಂತರ, ಅದನ್ನು ಪರಿಶೀಲಿಸಿ ಸ್ಪಷ್ಟೀಕರಣ ಪಡೆದ ನಂತರ ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 08): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 5/4 ರಲ್ಲಿ 2.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎಂ.ಎಸ್. ಶಿವಾನಂದ**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ ಜಮೀನಿನ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: 408185 ದಿನಾಂಕ: 31–01–2023 ರಂದು ವ್ಯವಸಾಯೇತರ Residential-layout ಉದ್ದೇಶಕ್ಕೆ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ

ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಜಮೀನು ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರುತ್ತದೆ. ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ್ದು, ಅದರಂತೆ ವಸತಿಗಾಗಿ 4653.40 ಚ.ಮೀ (ಶೇ.54.73), ಉದ್ಯಾನವನಕ್ಕಾಗಿ 872.00 ಚ.ಮೀ (ಶೇ.10.26), ನಾಗರೀಕ ಸೌಲಭ್ಯಕ್ಕಾಗಿ 851.76 ಚ.ಮೀ (ಶೇ.10.02), ರಸ್ತೆಗಾಗಿ 2123.28ಚ.ಮೀ (ಶೇ.24.99) ಕಾಯ್ದಿರಿಸಲಾಗಿದೆ. ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ದಾಖಲೆಗಳನ್ನು ಹಾಗೂ ಸ್ಥಳವನ್ನು ಪರಿಶೀಲಿಸಲಾಗಿದ್ದು, ಅರ್ಜಿದಾರರು ಇತ್ತೀಚಿನ ದಾಖಲೆಗಳನ್ನು ಸರ್ವೆ ನಕ್ಷೆ (ಪರವಾನಿಗೆ ಭೂಮಾಪಕರು ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿ ಖರಾಬು ಜಾಗವನ್ನು ಗುರುತಿಸಿ ಎಲ್ಲಾ ಅಳತೆಗಳನ್ನು ನಮೂದಿಸಿರುವ), ಇತ್ತೀಚಿನ ಆರ್.ಟಿ.ಸಿ, ಇ.ಸಿ. ಪ್ರತಿ (ಇಲ್ಲಿಯವರೆಗೆ), ಇತ್ತೀಚಿನ ಮ್ಯುಟೇಶನ್ ಪ್ರತಿ, ಕ್ರಯಪತ್ರ/ದಾನಪತ್ರ/ವಿಭಾಗಪತ್ರ, ಜಮೀನಿನ ಕಾಂಟೂರ್ ನಕ್ಷೆ, ಬ್ಯಾಂಕ್‌ನಿಂದ ನಿರಾಕ್ಷೇಪಣಾ ಪತ್ರ (ಸದರಿ ಜಮೀನಿನ ಮೇಲಿರುವ ಆಧಾರದ ಕಾರಣ) ಸಲ್ಲಿಸಬೇಕಾಗಿರುತ್ತದೆ. ಅದಕ್ಕೆ ಹಿಂಬರಹವನ್ನು ನೀಡಲಾಗಿರುತ್ತದೆ. ಸದರಿ ಜಮೀನಿಗೆ ಸಂಪರ್ಕ ರಸ್ತೆಯನ್ನು ಅರ್ಜಿದಾರರೇ ನಿರ್ಮಿಸಿಕೊಂಡಿದ್ದು, ಅದರ ಮಾಲೀಕತ್ವದ ಬಗ್ಗೆ ಹಾಗೂ ಸಂಪರ್ಕದ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ. ಸದರಿ ಜಮೀನಿನ ಚೆಕ್ಕುಬಂದಿಯಾಗಲೀ, ರಸ್ತೆಯ ಬಗ್ಗೆ ದಾಖಲೆಯಾಗಲೀ ಅರ್ಜಿದಾರರು ಸರಿಯಾಗಿ ನೀಡಿರುವುದಿಲ್ಲ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯವನ್ನು ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಅರ್ಜಿದಾರರು ಇತ್ತೀಚಿನ ದಾಖಲೆಗಳಾದ ಸರ್ವೆ ನಕ್ಷೆ ಇತ್ತೀಚಿನ ಆರ್.ಟಿ.ಸಿ, ಇ.ಸಿ. ಪ್ರತಿ ಇತ್ತೀಚಿನ ಮ್ಯುಟೇಶನ್ ಪ್ರತಿ, ಕ್ರಯಪತ್ರ/ದಾನಪತ್ರ/ವಿಭಾಗಪತ್ರ, ಜಮೀನಿನ ಕಾಂಟೂರ್ ನಕ್ಷೆ, ಬ್ಯಾಂಕ್‌ನಿಂದ ನಿರಾಕ್ಷೇಪಣಾ ಪತ್ರ (ಸದರಿ ಜಮೀನಿನ ಮೇಲಿರುವ ಆಧಾರದ ಕಾರಣ) ಸಲ್ಲಿಸಬೇಕಾಗಿದ್ದು, ಸ್ಥಳಪರಿಶೀಲನೆಯ ವೇಳೆ ಸಂಪರ್ಕ ರಸ್ತೆಗಳಿದ್ದು, ಅದರ ಮಾಲೀಕತ್ವದ ಬಗ್ಗೆ ಅಸ್ಪಷ್ಟತೆ ಇರುತ್ತದೆ ಹಾಗೂ ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯನ್ನೂ ಸಹ ಸರಿಪಡಿಸಿ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಮೇಲೆ ಹೇಳಿದ ದಾಖಲೆಗಳನ್ನು ಮತ್ತು ರಸ್ತೆಯ ವರ್ಗೀಕರಣ ಹಾಗೂ ಮಾಲೀಕತ್ವದ ಬಗ್ಗೆ ಅಗತ್ಯ ದಾಖಲೆಗಳನ್ನು ನೀಡಿದ ನಂತರ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 09): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 43/1 ರಲ್ಲಿನ 2.00 ಎಕರೆ ಮತ್ತು ಸ.ನಂ. 43/2 ರಲ್ಲಿನ 3.50 ಎಕರೆ ಒಟ್ಟು 5.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀ ಎಸ್.ಪಿ. ಚಂದ್ರಶೆಟ್ಟಿ, ಎಸ್.ಪಿ. ಸುರೇಶ್ ಮತ್ತು ಇತರರು)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಸದರಿ ವಸತಿ ವಿನ್ಯಾಸದಲ್ಲಿ ರಸ್ತೆ, ನೀರು ಸರಬರಾಜು ಮತ್ತು ಒಳಚರಂಡಿ, ವಿದ್ಯುಚ್ಛಕ್ತಿ ಹಾಗೂ ಉದ್ಯಾನವನ ಅಭಿವೃದ್ಧಿಗಳಿಗೆ ಸಂಬಂಧಿಸಿದ ಕಾಮಗಾರಿಗಳು ಪೂರ್ಣಗೊಂಡಿದ್ದು, ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಪಡೆದಿರುವ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಅಡಕಗೊಳಿಸಿ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿಗೆ ಪ್ರಾಧಿಕಾರದ ನಿರ್ಣಯದನ್ವಯ ಕರಡು ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ದಿನಾಂಕ: 31–03–2022 ರಂದು ಅನುಮೋದನೆ ನೀಡಲಾಗಿದೆ. ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ. ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು

ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ. ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಲೋಕೊಪಯೋಗಿ ಇಲಾಖೆ, ಚೆಸ್ಕಾಂ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ವಿನ್ಯಾಸದಲ್ಲಿ ರಸ್ತೆ, ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಜಮೀನುಗಳನ್ನು ಭೂ–ಮಾಲೀಕರು ಈವರೆಗೂ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಾದ ಕುಶಾಲನಗರ ಪುರಸಭೆಗೆ ಹಸ್ತಾಂತರಿಸಿರುವುದಿಲ್ಲ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಮೀನನ್ನು ಪ್ರಾಧಿಕಾರಕ್ಕೆ ಹಸ್ತಾಂತಿಸಿರುವುದಿಲ್ಲ. ಸದರಿ ಜಾಗಗಳನ್ನು ನೊಂದಾಯಿತ ಪರಿತ್ಯಾಜನ ಪತ್ರದ ಮೂಲಕ ಸ್ಥಳೀಯ ಸಂಸ್ಥೆಗೆ ಮತ್ತು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಬಹುದಾಗಿದೆ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬಹುದಾಗಿದೆ. ವಿಷಯನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ದಾಖಲೆಗಳು ಹಾಗೂ ನಿರಾಕ್ಷೇಪಣಾ ಪತ್ರವನ್ನು ಪರಿಗಣಿಸಿ, ಸ್ಥಳಪರಿಶೀಲನೆಯನ್ನು ಮಾಡಲಾಗಿದ್ದು, ಅರ್ಜಿದಾರರು ವಸತಿ ವಿನ್ಯಾಸ ನಕ್ಷೆಯಲ್ಲಿ ತೋರಿಸಿದ ನಿವೇಶನದ ಅಳತೆಗಳು ಸ್ಥಳದಲ್ಲಿ ಪರೀಕ್ಷಿಸಿದಾಗ ವ್ಯತ್ಯಾಸ ಕಂಡುಬರುತ್ತಿರುವ ಕಾರಣ ವಿನ್ಯಾಸ ನಕ್ಷೆಯನ್ನು ಸರಿಪಡಿಸಿ ಸಲ್ಲಿಸಬೇಕಾಗುತ್ತದೆ ಅಥವಾ ಸ್ಥಳದಲ್ಲಿ ನಿವೇಶನಗಳನ್ನು ಗುರುತಿಸುವ ಅಳತೆಗಲ್ಲುಗಳನ್ನು ಮತ್ತೊಮ್ಮೆ ಸರಿಪಡಿಸಿ ಅಳವಡಿಸಬೇಕಾಗಿರುತ್ತದೆ. ಸದರಿ ಬಡಾವಣೆ ಅಭಿವೃದ್ಧಿಪಡಿಸದಿರುವ ಬಗ್ಗೆ ಪಟ್ಟಣಪಂಚಾಯಿತಿಯ ಮುಖ್ಯಾಧಿಕಾರಿಯವರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಡಿಯುಡಿಸಿ ಪ್ರಕರಣ ಸಂ. 343/2016–17 ರಂತೆ ಪ್ರಕರಣ ದಾಖಲಿಸಿರುತ್ತಾರೆ. ಈ ಪ್ರಸ್ತಾವನೆಯ ಬಗ್ಗೆ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವ ಸಲುವಾಗಿ ಸಭೆಗಾಗಿ ಮಂಡಿಸಿದೆ.

ನಿರ್ಣಯ: ವಿಷಯವನ್ನು ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಸದರಿ ಬಡಾವಣೆ ಅಭಿವೃದ್ಧಿಪಡಿಸದಿರುವ ಬಗ್ಗೆ ಪಟ್ಟಣಪಂಚಾಯಿತಿಯ ಮುಖ್ಯಾಧಿಕಾರಿಯವರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಡಿಯುಡಿಸಿ ಪ್ರಕರಣ ಸಂ. 343/2016–17 ರಂತೆ ಪ್ರಕರಣ ದಾಖಲಿಸಿದ್ದು, ಹೂಡಿರುವ ದಾವೆಯ ಬಗ್ಗೆ ಸ್ಪಷ್ಟೀಕರಣವನ್ನು ನೀಡುವ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ. ಸ್ಥಳಪರಿಶೀಲನೆ ಮಾಡಿದಾಗ ಸ್ಥಳದಲ್ಲಿ ನಿವೇಶನಗಳನ್ನು ಗುರುತಿಸುವ ಅಳತೆಗಲ್ಲುಗಳನ್ನು ನಿವೇಶನ ಖರೀದಿದಾರರು ಅಂತಿಮ ವಿನ್ಯಾಸ ನಕ್ಷೆಯಲ್ಲಿ ನಮೂದಿಸಿರುವ ವಿಸ್ತೀರ್ಣದಂತೆ ಖಾತೆ ಮಾಡಿಸುವ ಮುನ್ನ ಮತ್ತೊಮ್ಮೆ ಸರಿಪಡಿಸಿ ಅಳವಡಿಸಿಕೊಳ್ಳಬೇಕಾಗಿರುವ ಷರತ್ತಿಗೆ ಒಳಪಟ್ಟಿರುತ್ತಾರೆ. ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ದಾವೆಯ ಬಗ್ಗೆ ಸ್ಪಷ್ಟೀಕರಣ ಪಡೆದ ನಂತರ ಹಾಗೂ ರಸ್ತೆ, ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಜಮೀನುಗಳನ್ನು ಭೂ–ಮಾಲೀಕರು ಸ್ಥಳೀಯ ಸಂಸ್ಥೆಗೆ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಮೀನನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದೆಂದು ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ(10): ದಿನಾಂಕ: 31–03–2021 ರಂದು ನಡೆದ ಪ್ರಾಧಿಕಾರದ 43ನೇ ಸಾಮಾನ್ಯ ಸಭೆಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯ ಸಂಖ್ಯೆ (ಇ) ರಲ್ಲಿನ ನಿರ್ಣಯದ ಬಗ್ಗೆ ಮರುಚರ್ಚಿಸಲು ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿರುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 31–03–2021 ರಂದು ನಡೆದ ಪ್ರಾಧಿಕಾರದ 43ನೇ ಸಾಮಾನ್ಯ ಸಭೆಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯ ಸಂಖ್ಯೆ (ಇ)ರ ನಿರ್ಣಯದಲ್ಲಿ ಈಗಾಗಲೇ ಸಂಪರ್ಕ ರಸ್ತೆಯನ್ನು ಪರಿಗಣಿಸಿ ಭೂ–ಪರಿವರ್ತನೆಗೊಳಿಸಿದಲ್ಲಿ ರಸ್ತೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪಡೆದುಕೊಂಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ಇನ್ನು ಮುಂದೆ ಭೂ–ಪರಿವರ್ತನೆಗೆ ಕಂದಾಯ ಇಲಾಖೆಗೆ ಈ ಕಛೇರಿಯಿಂದ ನಿರಾಕ್ಷೇಪಣಾ ಪತ್ರ ನೀಡುವಾಗ ಭೂ–ಪರಿವರ್ತನೆ

ಕೋರಿರುವ ಜಮೀನಿಗೆ ಸಾರ್ವಜನಿಕ ರಸ್ತೆ ಇದ್ದಲ್ಲಿ ಮಾತ್ರ ನಿರಾಕ್ಷೇಪಣಾ ಪತ್ರ ನೀಡಲು ಪರಿಗಣಿಸುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಲಾಗಿದೆ. ಸದರಿ ನಿರ್ಣಯದ ಬಗ್ಗೆ ಮರು ಚರ್ಚಿಸಲು ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ಪ್ರಸ್ತಾವನೆಯ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿದ್ದು, ಈ ಹಿಂದೆ ದಿನಾಂಕ: 31–03–2021 ರಂದು ನಡೆದ ಪ್ರಾಧಿಕಾರದ 43ನೇ ಸಾಮಾನ್ಯ ಸಭೆಯ ನಿರ್ಣಯವನ್ನು ಮರುಪರಿಗಣಿಸಲಾಗಿರುತ್ತದೆ. ಅರ್ಜಿದಾರರು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ಕೋರಿದ್ದಲ್ಲಿ, ಸಲ್ಲಿಸಿರುವ ಅಲಿನೇಷನ್ ನಕ್ಷೆ/11ಇ ಸ್ಕೆಚ್ ರಲ್ಲಿನ ಚೆಕ್ಕುಬಂದಿಯಲ್ಲಿ ರಸ್ತೆ ಎಂದು ನಮೂದಾಗಿದ್ದಲ್ಲಿ ತಾಂತ್ರಿಕ ಅನುಮೋದನೆ ನೀಡಬಹುದಾಗಿರುತ್ತದೆ. ಇಲ್ಲದಿದ್ದಲ್ಲಿ ಕೇವಲ ಸಂಪರ್ಕ ರಸ್ತೆ ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆಯಿಂದ ರಸ್ತೆ ಇರುವ ಬಗ್ಗೆ ಧೃಡೀಕರಣ ಪತ್ರವನ್ನು ಸಲ್ಲಿಸಿದ್ದಲ್ಲಿ ಮಾತ್ರ ಭೂಪರಿವರ್ತನೆಗೆ ತಾಂತ್ರಿಕ ಅನುಮೋದನೆ ನೀಡಬಹುದೆಂಬ ನಿರ್ಣಯವನ್ನು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 11): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು:

–ಯಾವುದೂ ಇರುವುದಿಲ್ಲ–

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ